# ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಹಿರೇಕೆರೂರು

## ಸಿ ಸಿ ನಂ. ೨೪ ಃ ೨೦೧೩

ಸಿ ಡಬ್ಲ್ಯೂ ಃ ೭
ಪಿ ಡಬ್ಲ್ಯೂ ಃ ೬

ಹೆಸರು ಃ ಡಾಃ ಹೊನ್ನಪ್ಪ

ತಂದೆಃ ಗಂಡನ ಹೆಸರು ಃ ಗಂಗಪ್ಪ ಮಾದರ

ವಯಸ್ಸು ಃ ೪೬ ವರ್ಷ

ಉದ್ಯೋಗ ಃ ಮಕ್ಕಳ ತಜ್ಞರು, ಸಾ ಆ, ಹಿರೇಕೆರೂರು

ವಾಸ ಸ್ಥಳ ಃ ಹಿರೇಕೆರೂರು

ಇಂದು ದಿನಾಂಕ ಃ ೦೧–೧೨–೨೦೧೬ ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದ

೨೮–೬–೨೦೧೦ ರಿಂದ ಇಲ್ಲಿವರೆಗೆ ಹಿರೇಕೆರೂರು ಸಾ ಆಸ್ಪತ್ರೆಯಲ್ಲಿ ವೈದ್ಯಾದಿಕಾರಿಯಾಗಿ ಕೆಲಸ ಮಾಡುತ್ತಿದ್ದೇನೆ.

ದಿಃ ೨೬–೮–೨೦೧೨ ರಂದು ನಾನು ಆಸ್ಪತ್ರೆ ಕರ್ತವ್ಯದಲ್ಲಿದ್ದೆ ಸಾಯಂಕಾಲ ೭ ಗಂಟೆಗೆ ಮೋಹನ ಎಂಬುವವನು ಹಲ್ಲೆಯಲ್ಲಿ ಗಾಯಗೊಂಡಿರುವುದಾಗಿ ಹೇಳಿ ಚಿತಿಕಿತ್ಸೆಗೆ ದಾಖಲಾದ ಆತನಿಗೆ ಪರೀಕ್ಷಿಸಿ ನೋಡಲಾಗಿ ಆತನ ಎಡ ಹಣೆಯ ಮೇಲೆ ಒಂದು ತೆರಚಿದ ಗಾಯವಾಗಿತ್ತು, ಮತ್ತೊಂದು ಗಾಯ ಎಡಕಿವಿ ಮೇಲೆ ಒಳನೋವಿನಿಂದ ಕೂಡಿದ ಗಾಯವಾಗಿತ್ತು ಮತ್ತು ಬೆನ್ನಿನ ಮೇಲೆ ಒಳನೋವಿನಿಂದ ಕೂಡಿದ ಗಾಯವಾಗಿತ್ತು ಆತನಿಗೆ ಚಿಕಿತ್ಸೆ ನೀಡಿದೆ ನನ್ನ ಅಬಿಪ್ರಾಯದಲ್ಲಿ ಈ ಮೇಲಿನ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ. ಈ ಬಗ್ಗೆ ಗಾಯದ ಪತ್ರ ಕೊಟ್ಟಿದ್ದು ಗಾಯದ ಪತ್ರವನ್ನು ನಿಪಿ ೪, ಅದರಲ್ಲಿ ಸಾಕ್ಷಿ ಸಹಿಯನ್ನು ೪(ಎ) ಅಂತಾ ಗುರುತಿಸಲಾಯಿತು. ನನ್ನ ಅಬಿಪ್ರಾಯದಲ್ಲಿ ಈ ಗಾಯಗಳು ಬಿದ್ದಾಗ ಮತ್ತೊಬ್ಬ ವ್ಯಕ್ತಿ ಹಲ್ಲೆ ಮಾಡಿದಾಗ ಆಗುವ ಸಾದ್ಯತೆ ಇದೆ ಮತ್ತು ಒಬ್ಬ ವ್ಯಕ್ತಿ ಚಪ್ಪಲಿನಿಂದ ಹೊಡೆದಾಗ ಆಗುವ ಸಾದ್ಯತೆ ಇದೆ. ನ್ನ ಅಬಿಪ್ರಾಯದಲ್ಲಿ ನ್ಯಾಯಾಲಯದಲ್ಲಿ ಇರುವ ಚಪ್ಪಲಿನಿಂದ ಹೊಡೆದಾಗ ಎಡಕಿವಿ ಮೇಲೆ ಗಾಯ ಆಗಬಹುದು.

ಪಾಟಿ ಸವಾಲು ಃ ಶ್ರೀ ಎಸ್ ಹೆಚ್ ಪಿ  ವಕೀಲರಿಂದ

ಗಾಯಾಳು ನಮ್ಮ ಆಸ್ಪತ್ರೆಗೆ ಸಾಯಂಕಾಲ ೭ ಗಂಟೆಗೆ ದಾಖಲಾಗಿದ್ದ. ಗಾಯಾಳು ಸುಮಾರು ೧೦ ರಿಂದ ೧೫ ನಿಮಿಷ ಆಸ್ಪತ್ರೆಯಲ್ಲಿದ್ದ. ಗಾಯಾಳು ಒಬ್ಬನೇ ಆಸ್ಪತ್ರೆಗೆ ಬಂದಿದ್ದ ಆತನ ಸಂಗಡ ಬೇರೆ ಯಾರು ಇರಲಿಲ್ಲ. ನಾನು ಗಾಯಾಳುವನ್ನು ವಿಚಾರಿಸಿದಾಗ ಆತನು ಮಾಸೂರು ಗ್ರಾಮದವನು ಅಂತಾ ಹೇಳಿದ. ಮಾಸೂರಿನಲ್ಲಿಯೂ ಸರಕಾರಿ ಆಸ್ಪತ್ರೆ ಇದೆ. ನಾನು ಗಾಯಾಳುವಿಗೆ ವಿಚಾರಿಸಿದೆ ಆತನು ಮಾಸೂರಿನಲ್ಲಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ಹೇಳಲಿಲ್ಲ. ಒಬ್ಬ ವ್ಯಕ್ತಿ ಸೈಕಲ ಮೇಲೆ ಹೋಗುತ್ತಿದ್ದಾಗ ಬಿದ್ದಾಗ ಈ ತರಹದ ಗಾಯಗಳು ಆಗುವ ಸಾದ್ಯತೆ ಇದೆ. ಅಲ್ಲದೇ ಸೈಕಲ ಮೇಲಿಂದ ಬಿದ್ದಾಗಲೇ ಕಿವಿ ಮೆಲೆ ಸಹ ತೆರಿಚಿದ ಗಾಯಗಳು ಆಗಬಹುದು. ಚಪ್ಪಲಿಯಿಂದ ಹೊಡೆದಾಗ ೨ನೇ ಗಾಯವ್ರೂ ಸಹಿತ ಆಗುವ್ರುದಿಲ್ಲಾ ಎಂದರೆ ಸರಿಯಲ್ಲ.  ನನಗೆ ಯಾವ ರೀತಿ ಗಾಯ ಆಗಿದೆ ಅಂತಾ ಗೊತ್ತಿಲ್ಲದಿದ್ದರೂ ಸಹಿತ ನ್ಯಾಯಾಲಯದಲ್ಲಿ ಚಪ್ಪಲಿಯಿಂದ ಹೊಡೆದಾಗ ಈ ತರಹದ ಗಾಯಗಳು ಆಗಬಹುದು ಅಂತಾ ಸುಳ್ಳು ಹೇಳುತ್ತೇನೆಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲಾ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ ಹೆ ಕೆ ಸರಿ ಇದೆ,

ಹಿರಿಯ ಸಿ ಜೆ ಮತ್ತು ಜೆ ಎಂ ಎಫ್ ಸಿ
ಹಿರೇಕೆರೂರು

**ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ**
**ಹಿರೇಕೆರೂರು**

**ಸಿ ಸಿ ನಂ. ೨೪ ಃ ೨೦೧೩**

ಸಿ ಡಬ್ಲ್ಯೂ ಃ ೮
ಪಿ ಡಬ್ಯ್ಯೂ ಃ ೬

ಹೆಸರು ಃ ಜಿ ಟಿ ಶ್ರೀಶೈಲಮೂರ್ತಿ

ತಂದೆಃ ಗಂಡನ ಹೆಸರು ಃ ತಿಪ್ಪೇಸ್ವಾಮಿ

ವಯಸ್ಸು ಃ ೫೪ ವರ್ಷ

ಉದ್ಯೋಗ ಃ ಪೋಲೀಸ್ ಇನ್ಸಸ್ಪೆಕ್ಟರ,

ವಾಸ ಸ್ಥಳ ಃ ಹಾವೇರಿ

ಇಂದು ದಿನಾಂಕ ಃ ೦೧–೧೨–೨೦೧೬ ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದ

ದಿಃ ೧೦–೧೧–೨೦೧೧ ರಿಂದ ೧೩–೨–೨೦೧೪ ರವರೆಗೆ ಹಿರೇಕೆರೂರು ಪೋ ಠಾಣೆಯಲ್ಲಿ ಪಿ ಎಸ್ ಐ ಅಂತಾ ಕೆಲಸ ಮಾಡಿದ್ದೇನೆ.

ದಿಃ ೨೬–೧೦–೨೦೧೨ರಂದು ಸಾಯಂಕಾಲ ೫.೫೦ ಗಂಟೆಗೆ ಠಾಣೆಯಲ್ಲಿದ್ದೆ ಆ ಸಮಯದಲ್ಲಿ ನ್ಯಾಯಾಲಯದಿಂದ ಬಂದ ಫಿರ್ಯಾದಿ ಸ್ವೀಕರಿಸಿ ಠಾಣಾ ಮೊಕದ್ದಮೆ ದಾಖಲಿಸಿ ಪ್ರ ವ ವರದಿ ದಾಖಲಿಸಿದೆ ಫಿರ್ಯಾದಿಯನ್ನು ಈಗಾಗಲೇ ನಿಪಿ ೧ ಅಂತಾ ಗುರುತಿಸಲಾಗಿದ್ದು ಪ್ರ ವ ವರದಿಯೊಂದಿಗೆ ಸಲ್ಲಿಸಿದ ಫಿರ್ಯಾದಿಯಲ್ಲಿ ಇರುವ ಸಾಕ್ಷಿ ಸಹಿಯನ್ನು ನಿಪಿ ೧(ಬಿ) ಅಂತಾ ಗುರುತಿಸಲಾಯಿತು. ಪ್ರ ವ ವರದಿ ಯನ್ನು ನಿಪಿ ೫, ಅದರಲ್ಲಿ ಇರುವ ಸಾಕ್ಷಿ ಸಹಿಯನ್ನು ನಿಪಿ ೫(ಎ) ಅಂತಾ ಗುರುತಿಸಲಾಯಿತು.

ನಂತರ ತನಿಖೆ ಮುಂದುವರೆಸಿ ದಿಃ ೨೮–೧೦–೨೦೧೨ ರಂದು ಸಿಬ್ಬಂದಿಯೊಂದಿಗೆ ಗಟನಾ ಸ್ತಳಕ್ಕೆ ಬೇಟಿ ಕೊಟ್ಟೆ ಬೆಳಗ್ಗೆ ೧೧ ಗಂಟೆಗೆ ಬೇಟಿ ಕೊಟ್ಟು ಸ್ತಳ ಪರೀಶಿಲಿಸಿ ಮಹಜರ ಮಾಡಿದೆ ಆ ಸಮಯದಲ್ಲಿ ಬೆಳಗ್ಗೆ ೧೧ ಗಂಟೆ ಆಗಿತ್ತು. ಸ್ತಳದಲ್ಲಿ ಫಿರ್ಯಾದುದಾರ ಹಾಜರಿದ್ದು ಸ್ತಳ ತೋರಿಸಿಕೊಟ್ಟ ಪಂಚರಾದ ರಮೇಶ ಮತ್ತು ಬೀರನಗೌಡ ಹಾಜರಿದ್ದರು. ಪಂಚನಾಮೆಯಲ್ಲಿ ಇರುವ ಸಾಕ್ಷಿ ಸಹಿಯನ್ನು ನಿಪಿ ೨(ಬಿ) ಅಂತಾ ಗುರುತಿಸಲಾಯಿತು. ನಂತರ ಅದೇ ದಿನ ಸಾಕ್ಷಿದಾರರಾದ ಚಾಸಾ ೪, ೫, ೬ ಇವರ ಹೇಳಿಕೆಗಳನ್ನು

ದಾಖಲಿಸಿಕೊಂಡೆ. ದಿಃ ೨೮–೧೧–೨೦೧೨ ರಂದು ಸಿಬಬಂದಿಯನ್ನು ಆಸ್ಪತ್ರೆಗೆ ಕಳುಹಿಸಿ ಗಾಯಾಳುವಿನ ಗಾಯದ ಪ್ರಮಾಣ ಪತ್ರ ಪಡೆದುಕೊಂಡೆ ಗಾಯದ ಪತ್ರದಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ ೪(ಬಿ) ಅಂತಾ ಗುರುತಿಸಲಾಯಿತು ಮತ್ತು ತನಿಖೆ ಪೂರ್ಣಗೊಂಡ ಕಾರಣ ಆರೋಪಣಾ ಪಟ್ಟಿ ಸಲ್ಲಿಸಿದೆ ಮತ್ತು ನ್ಯಾಯಾಲಯದಲ್ಲಿ ಇರುವ ಆರೋಪಿಯನ್ನು ಗುರುತಿಸುತ್ತೇನೆ. ಪ್ರಾಸಾ ೫ ರವರು ನಿಪಿ ३ ರಂತೆ ನನ್ನ ಸಮಕ್ಷಮ ಹೇಳಿಕೆ ಸಲ್ಲಿಸಿದ್ದಾರೆ.

ಪಾಟಿ ಸವಾಲು ಃ ಶ್ರೀ ಎಸ್ ಹೆಚ್ ಪಿ  ವಕೀಲರಿಂದ

ಖಾಸಗಿ ದೂರನ್ನು ನ್ಯಾಯಾಲಯದಲ್ಲಿ ಸಲ್ಲಿಸುವುದಕ್ಕಿಂತ ಪೂರ್ವದಲ್ಲಿ ಪಿರ್ಯಾದುದಾರ ಠಾಣೆಯಲ್ಲಿ ಬಂದು ದೂರು ದಾಖಲಿಸಿಲ್ಲ. ಬೆಳಗ್ಗೆ ೧೦.३೦ ಗಂಟೆಗೆ ಠಾಣೆ ಬಿಟ್ಟು ಕೃತ್ಯ ನಡೆದ ಸ್ಥಳಕ್ಕೆ ಬೇಟಿ ಕೊಟ್ಟೆ. ನನ್ನ ಸಂಗಡ ಇಬ್ಬರು ಸಿಬ್ಬಂದಿ ಬಂದಿದ್ದರು. ನಾನು ಸ್ತಳಕ್ಕೆ ಹೋದಾಗ ಹೊಟೇಲಿನ ಹತ್ತಿರ ಪಂಚರು ಇದ್ದರು ಅವರನ್ನು ಕರೆದೆ. ಪಂಚನಾಮೆಯನ್ನು ಹಾಲೇಶ ಬರೆದ. ಪಂಚನಾಮೆ ಸಮಯದಲ್ಲಿ ಇಬ್ಬರು ಪಂಚರು ಒಬ್ಬ ಪಿರ್ಯಾದುದಾರ ಮತ್ತು ಪೊಲೀಸ್ ಸಿಬ್ಬಂದಿ ಇದ್ದೆವು. ಪಿರ್ಯಾದುದಾರ ಮತ್ತು ಪಂಚರ ಸಹಿಗಳನ್ನು ಪಚಂನಾಮೆಗೆ ತೆಗೆದುಕೊಂಡೆ. ಚಾಸಾ ೪ ರವರ ಹೇಳಿಕೆಗಳನ್ನು ಮಾಸೂರಿನಲ್ಲಿಯೇ ದಾಖಲಿಸಿಕೊಂಡೆ. ಚಾಸಾ ೫, ೬ ರವರ ಹೇಳಿಕೆಗಳನ್ನು ಸಹಿತ ಆದೇ ಸ್ತಳದಲ್ಲಿ ದಾಖಲಿಸಿದೆ ೨೮–೧೦–೨೦೧೨ ರಂದು ದಾಖಲಿಸಿದೆ.  ನಾನು ಗಟನಾ ಸ್ತಳಕ್ಕೆ ಬೇಟಿ ಕೊಟ್ಟಿಲ್ಲ ಮತ್ತು ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ ಮತ್ತು ಸಾಕ್ಷಿದಾರರ ಹೇಳಿಕೆಗಳನ್ನು ದಾಖಲಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಗಟನೆಗೂ ಯಾವುದೇ ರೀತಿ ಸಂಬಂದ ಇಲ್ಲಾ ಎಂದರೆ ಸರಿಯಲ್ಲ ಮತ್ತು ಪಿರ್ಯಾದಿ ಮಾತು ಕೇಳಿ ಆರೋಪಿಯ ಮೇಲೆ ಸುಳ್ಳು ಆರೋಪಣಾ ಪಟ್ಟಿ ದಾಖಲಿಸಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲಾ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ ಹೆ ಕೆ ಸರಿ ಇದೆ,

ಹಿರಿಯ ಸಿ ಜೆ ಮತ್ತು ಜೆ ಎಂ ಎಫ್ ಸಿ

ಹಿರೇಕೆರೂರು